ಶೀ ರಿಯಾಜುದ್ದೀನ್ (ಉಪ–ತಹಶೀಲ್ದಾರ್, ನಾಡಕಛೇರಿ, ಕಜೂರಿ, ಗುಲಬರ್ಗಾ ಜಿಲ್ಲೆ) ಇವರನ್ನು ಗುಲಬರ್ಗಾ ಜಿಲ್ಲಾಧಿಕಾರಿಗಳು ಅಮಾನತ್ತುಗೊಳಿಸಿದ್ದಾರೆ ಹೆಚ್ಚಿನ ತನಿಖೆ ನಡೆಸಲು ಆದೇಶಿಸಿದ್ದು, ತನಿಖೆ ಪ್ರಾರಂಭಿಸಲಾಗುತ್ತಿದೆ

1490 (1889) ಶ್ರೀ ಪಾಟೀಲ್ ಬಿ ಆರ್ (ಆಳಂದ) – ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರವಾನ್ವಿತ ರಾಷ್ಟ್ರಪತಿಗಳು ಗುಲಬರ್ಗಾ ಜಿಲ್ಲೆಗೆ ಸುವರ್ಣ ಗ್ರಾಮೋದಯ ಯೋಜನೆಗೆ ಚಾಲನೆ ಕೊಡಲು ಬಂದಾಗ ಕಾರ್ಯಕ್ರಮದ ಮಧ್ಯದಲ್ಲಿ ನಡೆದ ಅಹಿತಕರ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಕಾರ್ಯಕ್ರಮ ವೈಫಲ್ಯಕ್ಕೆ ಅಧಿಕಾರಿಗಳೆ ಕಾರಣರೇ,

ಇ) ಹಾಗಿದ್ದಲ್ಲಿ, ಈ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಯಾವುದೇ ಅಧಿಕಾರಿಗಳ ಕಾರ್ಯ ವೈಫಲ್ಯತೆ ಕಂಡು ಬಂದಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

1491 (1362) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) – ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಶಿಂಗಟಾಲೂರು ಶ್ರೀ ವೀರಭದ್ರೇಶ್ವರ ದೇವಸ್ಥಾನ ಪ್ರವಾಸಿ ಕ್ಷೇತ್ರದಲ್ಲಿ ಸೇರಿದೆಯೇ,

ಆ) ಸೇರಿದ್ದರೆ ಅದರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಸದರಿ ದೇವಸ್ಥಾನದ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ರೂ 12 13 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ಮಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ

1492 (1363) ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) – ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ ಲಕ್ಕುಂಡಿ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು),

ಆ) ಅದಕ್ಕೆ ಹಣಕಾಸು ನೆರವು ಒದಗಿಸಲಾಗಿದೆಯೇ?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) 1 ಲಕ್ಕುಂಡಿಯಲ್ಲಿ 8 86 ಲಕ್ಷ ರೂ ಗಳ ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಬಸ್ ಸ್ಟ್ಯಾಂಡ್ ಬಳಿ ನಿರ್ಮಿಸಲಾಗಿದ್ದು, ಪ್ರವಾಸಿಗರಿಗಾಗಿ ತೆರೆಯಲಾಗಿದೆ

2 ರೂ 40 0 ಲಕ್ಷಗಳ ವೆಚ್ಚದಲ್ಲಿ ಹೆದ್ದಾರಿ ಸೌಲಭ್ಯ ನಿರ್ಮಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ ಇದನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಮೂಲಕ ಖಾಸಗೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ